## CENTRAL BOARD OF SECONDARY EDUCATION

## CODE NO: 115
## CLASS XII KANNADA
## MODEL QUESTION PAPER
## TERM – II

**Max. Marks-40** **Time-2hrs**

- Paper will be of five Sections - A, B,C,D & E will have 100% weightage i.e 40 marks
- The pattern of Question paper will have case based/situation based/assertive/Reasoning type
- Section - A Unseen Passage will have 2 Marks 2 Question (2 X 2=4 Marks)
- Section - B Grammar will have 2 Marks 3 Questions (2Marks X 3 Questions = 6 Marks)
- Section - C Seen Comprehension will have 2 Marks 2 Question (2X2=4 Marks)
- Section – D Literature (Prose, Poetry & Deergha gadya) (2X3=6, 3X2=6,4X1=4 Tot= 16Marks)
- Section – E (A. Creative writing 4 Marks 2 Questions & B History of Kannada Literature 2 Marks 1 question) (4 X 2 = 8 & 2 X 1= 2 Total = 10
- Question paper is Subjective

| Section – A, B,C,D & E Class: XII | | | | |
|---|---|---|---|---|
| Section | Description | Type of Questions | Total Marks | Percentage |
| Section-A (Unseen Comprehension paragraph) | One unseen paragraph of approximately around 200 words. | 2 * 2 | 4 | 10% |
| Section-B (Grammar) | Section - B Grammar will have 2 Marks 3 Questions | 2 * 3 | 6 | 15% |
| Section-C (Main Course Book) | One seen paragraph of approximately around 200 words. | 2 * 2 | 4 | 10% |
| Section D (Literature) | Literature (Prose, Poetry & Deergha gadya) | 2 * 3 = 6<br>3 * 2 = 6<br>4 * 1 = 4 | 16 | 40% |
| Section E<br>A. Creative Writing<br>B. History of Kannada Literature | A. Creative writing 4 Marks 2 Questions<br>B. History of Kannada Literature 2 Marks 1 question (Poets & Poets 'Books based) | 4 * 2 =8<br>2 * 1 = 2 | 10 | 25% |

**CENTRAL BOARD OF SECONDARY EDUCATION**

**CODE NO: 115**

**CLASS XII KANNADA**

**MODEL QUESTION PAPER**

**TERM – II**

**ONE PAPER** **TIME: 02HRS** **M.MARKS : 40**

**ತರಗತಿ :12** **ಸಿಬಿಎಸ್ಇ** **ವಿಷಯ : ಕನ್ನಡ**

**ಮಾದರಿ ಪ್ರಶ್ನೆ ಪತ್ರಿಕೆ**

**ಒಂದು ಪತ್ರಿಕೆ** **ಸಮಯ : 02ಗಂಟೆ** **ಅಂಕಗಳು : 40**

---

**ಸೂಚನೆಗಳು :**

1. ಪ್ರಶ್ನೆ ಪತ್ರಿಕೆಯು A, B, C, D ಮತ್ತು E ಎಂಬ ಭಾಗಗಳನ್ನು ಒಳಗೊಂಡಿದೆ.
2. ವಿಭಾಗ - A ವಾಚನ ಮತ್ತು ಗ್ರಹಿಕಾ ಕೌಶಲ್ಯದಲ್ಲಿ ಗದ್ಯಾಂಶ ಕೊಡಲಾಗಿದೆ. ಗದ್ಯಾಂಶದ ಕೆಳಗೆ ಎರಡು ಪ್ರಶ್ನೆಗಳನ್ನು ಕೊಡಲಾಗಿದೆ.
3. ವಿಭಾಗ - B ಅನ್ವಯಿಕ ವ್ಯಾಕರಣದಲ್ಲಿ ಎರಡು ಅಂಕದ ಮೂರು ಪ್ರಶ್ನೆಗಳನ್ನು ಕೊಡಲಾಗಿದೆ
4. ವಿಭಾಗ - C ಯಲ್ಲಿ ವಾಚನ ಮತ್ತು ಗ್ರಹಿಕಾ ಕೌಶಲ್ಯದಲ್ಲಿ ಪದ್ಯಾಂಶ ಕೊಡಲಾಗಿದೆ. ಪದ್ಯಾಂಶದ ಕೆಳಗೆ ಎರಡು ಪ್ರಶ್ನೆಗಳನ್ನು ಕೊಡಲಾಗಿದೆ.
5. ವಿಭಾಗ - D ಪಠ್ಯಗಳ ಅಧ್ಯಯನ( ಗದ್ಯ,ಪದ್ಯ ಮತ್ತು ದೀರ್ಘ ಗದ್ಯ) ವಿಭಾಗದಲ್ಲಿ ಕೊಟ್ಟಿರುವ 6 ಪ್ರಶ್ನೆಗಳಿಗೆ ಆಯ್ಕೆ ನೋಡಿ ಉತ್ತರಿಸಬೇಕು.
6. ವಿಭಾಗ – E ಸೃಜನಶೀಲ ಬರವಣಿಗೆ ಮತ್ತು ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ(ಕವಿ,ಕೃತಿ ಹಿನ್ನೆಲೆಯಲ್ಲಿ)

---

| | | |
|---|---|---|
| ವಿಭಾಗ- A | ವಾಚನ ಮತ್ತು ಗ್ರಹಿಕಾ ಕೌಶಲ್ಯ | 04 ಅಂಕಗಳು |
| ವಿಭಾಗ- B | ಅನ್ವಯಿಕ ವ್ಯಾಕರಣ | 06 ಅಂಕಗಳು |
| ವಿಭಾಗ- C | ವಾಚನ ಮತ್ತು ಗ್ರಹಿಕಾ ಕೌಶಲ್ಯ | 04 ಅಂಕಗಳು |
| ವಿಭಾಗ- D | ಪಠ್ಯಗಳ ಅಧ್ಯಯನ | 16 ಅಂಕಗಳು |
| ವಿಭಾಗ- E | ಸೃಜನಶೀಲ ಬರವಣಗೆ & ಸಂಕ್ಷಿಪ್ತ ಕವಿ ಪರಿಚಯ | 10 ಅಂಕಗಳು |
| | ಒಟ್ಟು ಅಂಕಗಳು | 40 ಅಂಕಗಳು |

## ವಿಭಾಗ A

### ( ವಾಚನ ಮತ್ತು ಗ್ರಹಿಕಾ ಕೌಶಲ್ಯ ) : 04 ಅಂಕಗಳು

**I. ಈ ಕೆಳಗೆ ಗದ್ಯಾಂಶ ಕೊಡಲಾಗಿದೆ. ಗದ್ಯಾಂಶ ಕೆಳಗೆ ಎರಡು ಪ್ರಶ್ನೆಗಳನ್ನು ಕೊಡಲಾಗಿದ್ದು,ಎರಡಕ್ಕೂ ಉತ್ತರಿಸಬೇಕು.**

ಕಾಪಾಡುವಿಕೆಯ ಕ್ರಿಯೆಯಲ್ಲಿ ಮಹಿಳೆ ಅಧಿಕ ಇಳುವರಿ ಪಡೆಯಲು ಹೊಲ ಗದ್ದೆಯ ಮೇಲೆ ಹೆಚ್ಚಿನ ಒತ್ತಡ ಹಾಕುವುದಿಲ್ಲ. ಮಣ್ಣಿನ ಸವಕಳಿ ತಡೆಯುತ್ತಾಳೆ,ಎಲ್ಲಿಂದಲೋ ಹಾರಿ ಬರುವ ಹಕ್ಕಿಗಳಿಗೆ ಗುಟುಕು ಸಿಗುವಂತೆ ಮಾಡುತ್ತಾಳೆ. ಬೆಳೆ ವೈವಿಧ್ಯವು ಕುಟುಂಬದ ಆಹಾರದ ಅಗತ್ಯಗಳನ್ನು ಪೌಷ್ಠಿಕಾಂಶಗಳನ್ನು ಪೂರೈಸುವುದು ಮಾತ್ರವಲ್ಲ ಕೃಷಿ ಭೂಮಿಯ

ಫಲವತ್ತತೆಯನ್ನು, ಸುತ್ತಲಿನ ಪರಿಸರವನ್ನು ರಕ್ಷಿಸುತ್ತದೆ. ಕೆಲವು ಉಪಬೆಳೆಗಳ ಎಲೆ ಕಡ್ಡಿಗಳೂ ನೆಲಕ್ಕೆ ಸಾರ ಒದಗಿಸುತ್ತವೆ. ಮತ್ತೆ ಕೆಲವು ಉಪ ಬೆಳೆಗಳು ಪ್ರಧಾನ ಬೆಳೆಗಳಿಗೆ ಬರುವ ನುಸಿಗಳನ್ನು ನಿಯಂತ್ರಿಸುತ್ತವೆ. ಕೆಲವು ಉಪಬೆಳೆಗಳ ಬೇರುಗಳು ಮಣ್ಣನ್ನು ಸಡಿಲಗೊಳಿಸಿ ನೀರು ಹಿಂಗುವಿಕೆಗೂ ನೆರವಾಗುತ್ತವೆ.

ಇಂಥವನ್ನು ಉಳಿಸಿಕೊಳ್ಳುವ,ಮುಂದುವರೆಸುವ ಹಂಬಲ ಮಹಿಳೆಯರಲ್ಲಿ ಹೆಚ್ಚಾಗಿ ಕಾಣುತ್ತದೆ. ಬಹುಬೆಳೆ, ಮಿಶ್ರಬೆಳೆ, ಕಳೆ ಸೇರಿದ ಕೃಷಿ ಪದ್ಧತಿಯ ನಾಶವು ಆಹಾರ ಪದ್ಧತಿಗೆ ಹಾಗೆಯೇ ಅಹಾರದ ಭದ್ರತೆಗೆ ಧಕ್ಕೆ ತಂದಿದೆ. ಪರಿಸರ ನಾಶದಿಂದ ಬರಗಾಲದಲ್ಲಿ ಗೆಡ್ಡೆ ಗೆಣಸು,ಕಾಡಿನ ಹಣ್ಣು, ಕಾಯಿ, ಸೊಪ್ಪು ಮುಂದಾದವು ಯಾವುದೂ ಈಗ ಸಿಗುವುದಿಲ್ಲ. ಪರಿಸರದ ಸಹಜ ಚಕ್ರಕ್ಕೆ ಕೊಡಲಿ ಪೆಟ್ಟು ಬಿದ್ದಿದೆ. ಕೃಷಿಯಲ್ಲಿ ಬೀಜದ ಪಾತ್ರದ ಹಾಗೆಯೇ ಬೀಜ ಸಂರಕ್ಷಣೆಯಲ್ಲಿ ಮಹಿಳೆಯರ ಪಾತ್ರವೂ ಪ್ರಧಾನವಾದದ್ದು.

ಹೊಸ ಸೃಷ್ಟಿಯ ಮೂಲವಾದ ಬೀಜವನ್ನು ಸಂಗ್ರಹಿಸುವುದರಿಂದ ಹಿಡಿದು ಮತ್ತೆ ಮುಂದಿನ ವರ್ಷ ಬಿತ್ತುವ ವರೆಗಿನ ಜವಾಬ್ದಾರಿಗಳೆಲ್ಲ ಮಹಿಳೆಯರದ್ದು. ಹುಡುಕಿ ಹುಡುಕಿ ಆಯ್ಕೆ ಮಾಡಿದ ಪೈರು-ಗಿಡ-ಮರಗಳಿಂದ ಬೀಜ ಸಂಗ್ರಿಹಿಸುವ ಮಹಿಳೆಯರು ಅದನ್ನು ಸಂಗ್ರಹಿಸಲು ಹಲವು ವಿಧಾನ ಬಳಸುತ್ತಾರೆ. ಬೀಜಗಳಿಗೆ ಹುಳು ಬೀಳದಂತೆ,ಬೂಷ್ಟು ಹಿಡಿಯದಂತೆ ಮಾಡಲು ಮಣ್ಣು ಮತ್ತುತ್ತಾರೆ, ಬೇವಿನ ಸೊಪ್ಪು ಅಥವಾ ಲಕ್ಕಿ ಸೊಪ್ಪಿನ ಜೊತೆ ಇಡುತ್ತಾರೆ. ಇಂತಹ ರೋಗ ನಿರೋಧಕ, ಬೀಜ ಸಂರಕ್ಷಕ ವಸ್ತುಗಳೂ ಸುತ್ತಲಿನ ಪರಿಸರದಲ್ಲೇ ಸುಲಭವಾಗಿ ದೊರೆಯುತ್ತವೆ. ಮಹಿಳೆಯರ ಬೀಜ ಸಂರಕ್ಷಣೆಯಲ್ಲಿ ರಾಸಾಯನಿಕಗಳಿಗೆ ಜಾಗವಿಲ್ಲ. ಈ ಬೀಜ ಸಂರಕ್ಷಣೆಯ ವಿಧಾನಗಳು ಪರಿಸರ ಸ್ನೇಹಿಯಾದ ಕಾರಣ ಅವುಗಳಗೆ ಜಾಗ ಅಡುಗೆ ಮನೆಗಳಲ್ಲಿ, ಕುಡಿಕೆ – ಮಡಿಕೆಗಳಲ್ಲಿ, ಜಂತಿಗೆ ತೂಗು ಬಿಟ್ಟ ಬಟ್ಟೆಯ ಪುಟ್ಟ ಗಂಟುಗಳಲ್ಲಿ, ಒಲೆಯ ಮೇಲಿನ ಮರದ ಕಟ್ಟೆಯಲ್ಲಿ,ಹೊಗೆಯ ಗೂಡುಗಳಲ್ಲಿ. ನಿತ್ಯದ ಬದುಕಿನ ಭಾಗವಾಗುವ ಇವು ಮನೆಯ ಮಕ್ಕಳಿಗೆ ಪರಿಸರದೊಂದಿಗಿನ ಸಂಬಂಧಕ್ಕೆ ಮತ್ತೊಂದು ಆಯಾಮವನ್ನು ತಂದುಕೊಡುತ್ತದೆ.

ಪ್ರಶ್ನೆಗಳು

ಅ. ಬೆಳೆ ವೈವಿಧ್ಯದಿಂದಾಗುವ ಪ್ರಯೋಜನಗಳಾವುವು? 2

ಆ. ಬೀಜ ಸಂರಕ್ಷಣೆಯಲ್ಲಿ ಮಹಿಳೆ ಅನುಸರಿಸುವ ಕ್ರಮಗಳು ಯಾವುವು? 2

## ವಿಭಾಗ – B

## ಅನ್ವಯಿಕ ವ್ಯಾಕರಣ : 6 ಅಂಕಗಳು

**2. ಈ ಕೆಳಗಿನ ವಾಕ್ಯದ ಪ್ರಕಾರ ತಿಳಿಸಿ ಮತ್ತು ಭವಿಷ್ಯತ್ಕಾಲಕ್ಕೆ ಪರಿವರ್ತಿಸಿ. 2**

ಅ). ನಾಳೆಯ ದಿನ ನಾನು ಪಾಠಶಾಲೆಗೆ ಹೋಗುಲಾರೆನು.

**3. ಈ ಕೆಳಗಿನ ಗಾದೆಮಾತುಗಳಲ್ಲಿ ಒಂದನ್ನು ವಿವರಿಸಿ: 2**

ಅ. ಹಾಸಿಗೆ ಇದ್ದಷ್ಟು ಕಾಲು ಚಾಚು.

ಬ. ತಾಳಿದವನು ಬಾಳಿಯಾನು

**4. ಪ್ರಸ್ತಾರ ಹಾಕಿ, ಗಣ ವಿಂಗಡಣೆ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 2**

ಇನ್ನು ಹುಟ್ಟದೆಯಿರಲಿ ನಾರಿಯ
ರೆನ್ನವೊಲು ಭಂಗಿತರು ಭುವನದೊ
ಳಿನ್ನು ಜನಿಸಲುಬೇಡ ಗಂಡರು ಭೀಮಸನ್ನಿಭರು

ಅಥವಾ

ಬರೆಗಂ ಬಾರದಿರೆನುತುಂ
ಧರಿತ್ರಿಯೊಳ್ ಮೈಯನೊಕ್ಕು ಮೂರ್ಛೆಗೆ ಸಂದಳ್

## ವಿಭಾಗ - C

### ( ವಾಚನ ಮತ್ತು ಗ್ರಹಿಕಾ ಕೌಶಲ್ಯ ) : 04 ಅಂಕಗಳು

**5. ಈ ಕೆಳಗಿನ ಪದ್ಯಾಂಶವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

**ಒಮ್ಮೆ ನಗುತ್ತೇವೆ**

ದನಗಳಿಗೆ ಮೇವಿಲ್ಲ
ಜನಗಳಿಗೆ ನೀರಿಲ್ಲ
ಗಂಜಿಗೂ ಗತಿಯಿಲ್ಲ.
ನನ್ನವರು
ಸತ್ತ ದನಗಳ
ಕಿತ್ತು ತಿನ್ನುವುದನ್ನು
ಕಣ್ಣಾರೆ ಕಾಣುತ್ತ
ಕತಕತನೆ ಕುದಿವ
ಅಗ್ನಿಪರ್ವತವಾಗಿದ್ದೇನೆ

ಏನೂ ಮಾಡಲಾಗದೆ
ಅವರ ಸ್ಥಿತಿ ನೋಡಲಾಗದೆ
ಅವರಿಗಾಗಿ
ಮುಗಿಲತ್ತ ಕೈಚಾಚಿ
ನಿಂತಿದ್ದೇನೆ,
ಧಗಧಗಿಸಿ ಉರಿವ
ಜ್ವಾಲಾಮುಖಿಯಾಗಿದ್ದೇನೆ.
ನನ್ನವರಿಗಾಗಿ
ನಾನೆಂದೂ ನಂಬಿರದ
ದೇವರಲ್ಲಿ
ಮೊರೆಯಿಡುತ್ತೇನೆ,
ಕಂಡೆ ಇರದ
ದೈವದ
ಸಹಾಯ ಬೇಡುತ್ತೇನೆ.

ಯಾರೂ ನನ್ನವರ
ಕೈ ಹಿಡಿಯದಾಗ
ನನ್ನ ಕಂಬನಿಯ
ಲಾವಾರಸದಲ್ಲಿ
ವಿಶ್ವವನ್ನೇ
ಮುಳುಗಿಸಿ ಬಿಡುವ
ಛಲ ಮೂಡುತ್ತದೆ.
ಬೆಂಕಿ ನಾಲಗೆ ಚಾಚಿ
ನನ್ನವರ ದಾರಿದ್ರ್ಯವನ್ನೇ
ಆಪೋಶನ ಮಾಡುತ್ತೇನೆ.
ಅವರ ದೀನ
ದಲಿತತನಕ್ಕೆ ಧಿಕ್ಕಾರವಿರಲಿ!
ಅವರ ನೋವನ್ನೇ
ಸರ್ವನಾಶ ಮಾಡುತ್ತೇನೆ.

ನನ್ನವರನ್ನು
ನನ್ನ ಪ್ರೀತಿಯ
ಜನರನ್ನು
ಎಲ್ಲರೂ ನಾನೇ
ಆದವರನ್ನು
ನಾನು ನಗಿಸುತ್ತೇನೆ,
ಧಗೆಯಿಂದ
ಹೊರನುಗಿಸುತ್ತೇನೆ
ಹೊಗೆಯಿಂದ
ಪಾರು ಮಾಡುತ್ತೇನೆ
ಅವರನ್ನು ನಗಿಸುತ್ತೇನೆ.

**ಪ್ರಶ್ನೆಗಳು:**

ಅ). ಕವಯತ್ರಿ ಅಗ್ನಿಪರ್ವತ  ಆಗಿದ್ದೇನೆ ಎನ್ನಲು ಕಾರಣಗಳೇನು? 2

ಆ). ಕವಯತ್ರಿಗೆ ಯಾವ ಛಲ ಮೂಡುತ್ತದೆ? 2

## ವಿಭಾಗ - D

**ಪಠ್ಯಗಳ ಅಧ್ಯಯನ( ಗದ್ಯ,ಪದ್ಯ ಮತ್ತು ದೀರ್ಘ ಗದ್ಯ) : 16 ಅಂಕಗಳು**

**6. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. 2 * 3 =6**

ಅ). ಜಾಲಿಯ ಮರದ ನಿರ್ಥಕತೆಯನ್ನು ಪುರಂದರದಾಸರು ಹೇಗೆ ತಿಳಿಸಿದ್ದಾರೆ?

ಅ). ಕಲಾಂ ಅವರು ತಾವು ಆತ್ಮಕಥೆ ಬರೆದುದು ಏತಕ್ಕಾಗಿ?

ಅಥವ

ಮುದ್ದಣನನ್ನು ಮನೋರಮೆ ಹೇಗೆ ಉಪಚರಿಸಿದಳು?

ಇ). ಕೃಷ್ಣೆಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?

**7. ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ 3* 2 = 6**

ಅ). ಕಲಿ ಭೀಮನೇ ಮಿಡುಕುಳ್ಳ ಗಂಡನು

ಅಥವ

ಮನ್ನಿಸಲಿ ನಿಮ್ಮನ್ನ ಆ ದೇವರೆ!

ಆ). ಕನ್ನಡ ಕತ್ತುರಿಯಲ್ತೆ

**8. ಐದು – ಆರು ವಾಕ್ಯಗಳಲ್ಲಿ ಉತ್ತರಿಸಿ. 4 * 1 = 4**

ಅ). ಆನೆ ಮತ್ತು ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದ್ದೇಕೆ?

## ವಿಭಾಗ - E

**ಸೃಜನಶೀಲ ಬರವಣಿಗೆ ಮತ್ತು ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ(ಕವಿ,ಕೃತಿ ಹಿನ್ನೆಲೆಯಲ್ಲಿ) : 10 ಅಂಕಗಳು**

**9. ಕೆಳಗಿನವುಗಳಲ್ಲಿ ಒಂದನ್ನು ಕುರಿತು ನಿಮ್ಮ ಅನುಭವವನ್ನು ಬರೆಯಿರಿ. 4 * 1 =4**

ಅ). ಕಳೆದು ಹೋದ ಹಣದ ಪರ್ಸೊಂದು ನಿಮಗೆ ಸಿಕ್ಕಾಗ........

ಆ). ನೀವು ಕಣ್ಣಾರೆ ಕಂಡ ಅಪಘಾತದ ಅವಘಡ..........

**10. ನಮ್ಮ ಊರಿನಲ್ಲಿ ಬ್ಯಾಂಕ್ ಇಲ್ಲದಿರುವುದರಿಂದ ಸಾರ್ವಜನಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ. 4 * 1 = 4**

**11. ಕವಿ-ಕೃತಿ ಪರಿಚಯ ಬರೆಯಿರಿ(ಬೇಕಾದ ಒಬ್ಬರ ಕುರಿತು) 2 * 1 = 2**

ಅ). ದ.ರಾ.ಬೇಂದ್ರೆ

ಆ). ಬಸವಣ್ಣ.

****************